ಹಾಡುಗಳನ್ನು ಹಾಡಿದ, ಭಾವನೆಗಳನ್ನು ವ್ಯಕ್ತಪಡಿಸಿದ. ಸಂಗೀತವು ತನ್ನ ಚೌಕಟ್ಟನ್ನು ಬದಲಾಯಿಸುತ್ತಲೇ ಇರುತ್ತದೆ. ಶ್ರದ್ಧೆಯು ಬೇರೆ ಬೇರೆ ಬಿಂದುವಿನಲ್ಲಿ ಲಭ್ಯವಾಗುತ್ತದೆ.

◆ ನಿಮ್ಮ ಕಲಿಕೆಯ ಹಂತಗಳ ಬಗ್ಗೆ ಹೇಳಿ.

ಬಾಲ್ಯದಲ್ಲಿಯೇ ಸಂಗೀತವು ನಮ್ಮ ಜೀವನಶೈಲಿಯ ಭಾಗವಾಗಿತ್ತು. ಮನೆಯಲ್ಲಿ ಎಲ್ಲ ಮಕ್ಕಳಿಗೂ ಸಂಗೀತ ಕಲಿಸಲು ಗುರುಗಳು ಬರುತ್ತಿದ್ದರು. ಆದ್ದರಿಂದ ಅದೊಂದು ಪ್ರತ್ಯೇಕ ಕಲಿಕೆಯೆಂದು ಅನಿಸಲಿಲ್ಲ. ಅಲ್ಲದೆ, 'ನೀನು ಇನ್ನುಮುಂದೆ ಸಂಗೀತ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಳ್ಳಲಿದ್ದಿ' ಎಂಬ ರೀತಿಯಲ್ಲಿ ಯಾರೂ ನನ್ನನ್ನು ಬೆಳೆಸಲಿಲ್ಲ. ನಾನು ನನ್ನ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಅತ್ಯುತ್ತಮ ಅಂಕಗಳನ್ನು ಪಡೆಯುತ್ತಿದ್ದೆ. ಹಾಗಾಗಿ ಅಲ್ಲಿ ಏನೇನು ಸಾಧನೆ ಸಾಧ್ಯವೋ ಅವನ್ನೆಲ್ಲ ಮಾಡುತ್ತ ಮುಂದುವರೆಯುತ್ತಿದ್ದೆ. ನಾನು ಸುಮಾರು 16–17 ವರ್ಷದವಳಿದ್ದಾಗ ನನ್ನ ಅಮ್ಮ ಮಾಣಿಕ್ ಭಿಡೆ ಅವರು ಜೈಪುರ್ ಖ್ಯಾಲ್ ಗಾಯಕಿಯನ್ನು ನನಗೆ ಪರಿಚಯಿಸಿದರು. ಅಮ್ಮನೇ ಗುರುವಾಗಿ ದೊರೆತುದು ನನ್ನ ಸೌಭಾಗ್ಯ. ಅವರೊಂದಿಗೆ ಕುಳಿತು ಹಾಡುವಾಗ ನನ್ನ ಪಾಲಿಗೆ ಸಂಗೀತದ ಮತ್ತೊಂದು ಮಗ್ಗುಲು ಅನಾವರಣಗೊಳ್ಳುತ್ತ ಹೋಯಿತು. ಸಂಗೀತವೆಂದರೆ ಕೇವಲ ತಾಳಬದ್ಧವಾಗಿ ಹಾಡುವುದು, ಶ್ರುತಿಯನ್ನು ತಪ್ಪಿಸದೆ, ನಿಯಮಗಳನ್ನು ಅನುಸರಿಸುತ್ತ ಸಾಗುವುದಷ್ಟೇ ಅಲ್ಲ; ಇವುಗಳನ್ನೆಲ್ಲ ಮೀರಿ ಮತ್ತೇನೋ ಇದೆ ಎಂಬ ಅರಿವಿನಿಂದ ಸಂಗೀತ ಪಯಣದ ಬಗ್ಗೆ ಕುತೂಹಲ ಮೂಡಿತು. ಅಲ್ಲಿಂದ ನನ್ನ ಕಲಿಕೆಯ ಹಾದಿ ವಿಭಿನ್ನವಾಯಿತು. ನಾನು ನಿರಂತರ ಅಭ್ಯಾಸದಲ್ಲಿ ತೊಡಗಿಕೊಂಡೆ. ಅಮ್ಮನೇ ನನ್ನ ಗುರುವಾದ್ದರಿಂದ ನನಗೆ ಅದೊಂದು ಲಾಭವೇ ಆಗಿತ್ತು.

ನಾನು ಬಯೋಕೆಮಿಸ್ಟ್ರಿಯಲ್ಲಿ ಪಿಎಚ್. ಡಿ. ಮಾಡುತ್ತಿದ್ದೆ. ಸಂಗೀತ ಕಛೇರಿಗಳನ್ನು ಕೂಡ ಕೊಡುತ್ತಿದ್ದೆ. ಓದು, ಮದುವೆ, ಸಂಸಾರವೆಂಬ ಹಂತಗಳನ್ನು ಪ್ರವೇಶಿಸುವ ವೇಳೆಗೆ ನನಗೆ ವೃತ್ತಿ ಕ್ಷೇತ್ರವೊಂದನ್ನು ಆಯ್ಕೆ ಮಾಡಿಕೊಳ್ಳಲೇಬೇಕಾದ ಸಂದರ್ಭ ಎದುರಾಯಿತು. ಈ ಸಂದರ್ಭದಲ್ಲಿ ನಾನು ಪತಿ ರಾಜೇಂದ್ರ ದೇಶಪಾಂಡೆ ಅವರ ಬಳಿ, 'ಒಂದು ವರ್ಷ ನಾನು ಸಂಗೀತದಲ್ಲಿಯೇ ಸಂಪೂರ್ಣವಾಗಿ ತೊಡಗಿಕೊಳ್ಳುತ್ತೇನೆ. ಆ ಬಳಿಕ ನಿರ್ಧಾರ ತೆಗೆದುಕೊಳ್ಳುತ್ತೇನೆ' ಎಂದು ಹೇಳಿದೆ. ಹಾಗೆ ಒಂದು ವರ್ಷದ ಅವಧಿಯಲ್ಲಿ ನನ್ನ ಹೃದಯವು ಸಂಗೀತದಲ್ಲಿಯೇ ಸಂತೋಷದಿಂದ ಇರುತ್ತದೆ ಎಂಬುದರ ಅರಿವು ನನಗಾಯಿತು.

ಕಲಿಯುವಿಕೆಯು ಒಂದು ಸಂತೋಷದ ಪ್ರಕ್ರಿಯೆ. ಅಲ್ಲಿ ಚಿಂತೆಯೇನೂ ಇರುವುದಿಲ್ಲ. ಗುರುಗಳು ತೋರಿದ ದಾರಿಯಲ್ಲಿ ಸಾಗುವುದಲ್ಲವೇ? ಆದರೆ, ಅನಂತರ ನಮ್ಮದೇ ಶೈಲಿಯ ದಾರಿಯಲ್ಲಿ ಸಾಗುವುದು ಸವಾಲು. ಆಯ್ಕೆಯ ಸಂದರ್ಭ ಎದುರಾದಾಗ ನನಗೆ ಗುರುಗಳಾದ ಕಿಶೋರಿ ತಾಯಿ ಅಮೋನ್ಕರ್ ಅವರು ಹೇಳಿದ ಮಾತೊಂದು ದಾರಿದೀಪದಂತೆ ಎದುರಾಯಿತು. 'ನಿನಗೆ ಈ ಪಯಣದಲ್ಲಿ ಬೆಳಕು ಕಾಣುತ್ತಿದೆಯೇ... ಹಾಗೇನಾದರೂ ಕಾಣಿಸಿದರೆ ಈ ದಾರಿಯನ್ನು ಆಯ್ಕೆ ಮಾಡಿಕೋ...' ಎಂದು ಅವರು ಹೇಳಿದ್ದರು. ನಾನು ಅದೇ ಪ್ರಶ್ನೆಯನ್ನು ನನ್ನ ಅಂತರಂಗಕ್ಕೆ ಕೇಳಿಕೊಂಡೆ. ಈ ದಾರಿಯನ್ನು ಆಯ್ಕೆ ಮಾಡಿಕೊಂಡೆ.

◆ ಆ ಬೆಳಕಿನ ಹಾದಿ ಯಾವ ರೀತಿಯದು?

ಆ ಹಾದಿ ಬಹಳ ಸುಂದರವಾದುದು ಎಂದು ಅನೇಕ ಬಾರಿ ನನಗೆ ಅನಿಸಿದೆ. ಒಂದು ಉದಾಹರಣೆ ಕೊಡುವೆ. ಪ್ರತೀ ಭಾವನೆಗೆ ವಿರುದ್ಧವಾದ ಮತ್ತೊಂದು ಭಾವನೆ ಇದ್ದೇ ಇದೆ. ಹರ್ಷಕ್ಕೆ ದುಃಖವೆಂಬ ವಿರುದ್ಧ ಭಾವನೆಯಿದೆ. ಸುಖಕ್ಕೆ ಕಷ್ಟವಿದ್ದಂತೆ. ಆದರೆ, ಆನಂದ ಎಂಬ ಪದಕ್ಕೆ ವಿರೋಧಪದವಿಲ್ಲ. ಅದು ಹರ್ಷವಲ್ಲ– ಖುಷಿಯಲ್ಲ. ಅದೊಂದು ಸ್ಥಿತಿ. ನಾವು ಹೇಳುವ ನವರಸಗಳಲ್ಲಿ ಐದು ರಸಗಳು ಋಣಾತ್ಮಕವಾದವು. ಋಣಾತ್ಮಕ ರಸವಿರಲಿ, ಧನಾತ್ಮಕ ರಸವಿರಲಿ – ಕಲಾಪ್ರಕಾರಗಳಲ್ಲಿ, ಈ ರಸಗಳನ್ನು ಮನಮುಟ್ಟುವಂತೆ ಅಭಿವ್ಯಕ್ತಿಗೊಳಿಸುವುದು ಹೇಗೆ ಎಂಬ ಸವಾಲು ಕಲಾವಿದರ ಮುಂದಿರುತ್ತದೆ. ಉದಾಹರಣೆಗೆ ಭಯಾನಕವೆಂಬ ಋಣಾತ್ಮಕ ರಸವನ್ನು ಪ್ರಸ್ತುತಪಡಿಸುವ ಸನ್ನಿವೇಶ ಕಲ್ಪಿಸಿಕೊಳ್ಳಿ. ಅದನ್ನು ಪರಿಣಾಮಕಾರಿಯಾಗಿ, ಯಶಸ್ವಿಯಾಗಿ